155

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಎಲ್ಲಾ ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟು ಅನುಪಾತ ಮತ್ತು ಶುಲ್ಕ ನಿಗದಿಪಡಿಸುವ ಬಗ್ಗೆ

****

**ಪ್ರಸ್ತಾವನೆ:**

ರಾಜ್ಯದಲ್ಲಿನ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಇದುವರೆಗೆ ಡಿಪ್ಲೊಮಾ ಇನ್ ಫಾರ್ಮಸಿ ಕೋರ್ಸ್‌ಗೆ ಸರ್ಕಾರಿ ಕೋಟಾ ನಿಗದಿಯಾಗಿರಲಿಲ್ಲ. ಬಿ.ಫಾರ್ಮಸಿ ಕೋರ್ಸಿಗೆ ಸರ್ಕಾರಿ ಮತ್ತು ಖಾಸಗಿ ಆಡಳಿತ ಮಂಡಳಿ ಕೋಟಾ ಅನುಪಾತ ಕ್ರಮವಾಗಿ 20:80 ಹಾಗೂ ಫಾರ್ಮ ಡಿ., ಫಾರ್ಮ ಡಿ. (ಪಿ.ಬಿ) ಮತ್ತು ಎಂ. ಫಾರ್ಮ ಕೋರ್ಸ್‌ಗಳಿಗೆ ಅದೇ ಅನುಪಾತ 50:50ರಂತೆ ನಿಗದಿಯಾಗಿದ್ದು ಅದರಂತೆ ಸೀಟ್ ಮ್ಯಾಟ್ರಿಕ್ಸ್ ಪ್ರಕಟಿಸಿ ವಿದ್ಯಾರ್ಥಿಗಳನ್ನು ಭರ್ತಿ ಮಾಡಲಾಗುತ್ತಿತ್ತು. 2018–19ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರವು ಖಾಸಗಿ ಕಾಲೇಜುಗಳಲ್ಲಿ ಡಿ.ಫಾರ್ಮ ಕೋರ್ಸಿನಲ್ಲಿಯೂ ಸರ್ಕಾರಿ ಕೋಟಾ ಪಡೆಯಲು ಮತ್ತು ಇತರೆ ಕೋರ್ಸ್‌ಗಳ ಅನುಪಾತವನ್ನು ಪರಿಷ್ಕರಿಸಲು ಹಾಗೂ ಶುಲ್ಕವನ್ನು ಸಹ ಪರಿಷ್ಕರಿಸಲು ನಿರ್ಧರಿಸಿತು. ಇದರಿಂದಾಗಿ ಈ ಬಗ್ಗೆ ದಿನಾಂಕ: 13.06.2018ರಂದು ಕರ್ನಾಟಕ ಫಾರ್ಮಸಿ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಮತ್ತು ಕಾಲೇಜುಗಳ ಪ್ರತಿನಿಧಿಗಳೊಂದಿಗೆ ಪ್ರಾಥಮಿಕ ಸಭೆಯನ್ನು ಕರೆದು ಚರ್ಚಿಸಿತು. ಆ ಸಂದರ್ಭದಲ್ಲಿ ಸದರಿ ಅಸೋಸಿಯೇಷನ್ ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಸೀಟುಗಳ ಅನುಪಾತ ಹಾಗೂ ಶುಲ್ಕದ ಕೋರಿಕೆಯನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ಮತ್ತೊಂದು ಸುತ್ತಿನ ಮಾತುಕತೆ ಸೂಕ್ತವೆಂಬುದನ್ನು ಮನಗಂಡು ದಿನಾಂಕ:15.06.2018ರಂದು ಆಡಳಿತ ಮಂಡಳಿಯೊಂದಿಗೆ ಸಭೆ ಏರ್ಪಡಿಸಿ ಚರ್ಚೆ ನಡೆಸಲಾಯಿತು. ದಿನಾಂಕ: 15.06.2018 ರಂದು ನಡೆದ ಸಭೆಯಲ್ಲಿ ಇಲಾಖೆಯ ಅಂಕಿ–ಅಂಶಗಳನ್ನು ಪರಿಶೀಲಿಸಲಾಯಿತು. ಆ ಸಂದರ್ಭದಲ್ಲಿ ಕರ್ನಾಟಕ ಫಾರ್ಮಸಿ ಕಾಲೇಜು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ರವರು 2018–19 ಮತ್ತು 2019–20ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ ಹಾಗೂ 2018–19ನೇ ಸಾಲಿಗೆ ಶುಲ್ಕ ನಿಗದಿ ಬಗ್ಗೆ ಈ ಕೆಳಗಿನಂತೆ ಮನವಿ ಸಲ್ಲಿಸಿರುತ್ತಾರೆ.

**2018–19ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ.**

| ಕ್ರ. ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು. | ಷರಾ |
|---|---|---|---|---|
| 1. | ಡಿ.ಫಾರ್ಮ | 10% | 90% | ಕೇವಲ ಡಿ.ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |
| 2. | ಡಿ.ಫಾರ್ಮ | 20% | 80% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ. |
| 3. | ಬಿ.ಫಾರ್ಮ | 25% | 75% | – |
| 4. | ಎಂ.ಫಾರ್ಮ | 30% | 70% | – |
| 5. | ಫಾರ್ಮ ಡಿ. | 30% | 70% | – |
| 6. | ಫಾರ್ಮ ಡಿ. (ಪಿ.ಬಿ) | 30% | 70% | – |

......2

194



**2019-20ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ.**

| ಕ್ರ ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು. | ಷರಾ |
|---|---|---|---|---|
| 1. | ಡಿ.ಫಾರ್ಮ | 20% | 80% | ಕೇವಲ ಡಿ.ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |
| 2. | ಡಿ.ಫಾರ್ಮ | 30% | 70% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ. |
| 3. | ಬಿ.ಫಾರ್ಮ | 30% | 70% | - |
| 4. | ಎಂ.ಫಾರ್ಮ | 30% | 70% | - |
| 5. | ಫಾರ್ಮ ಡಿ. | 30% | 70% | - |
| 6. | ಫಾರ್ಮ ಡಿ. (ಪಿ.ಬಿ) | 30% | 70% | - |

**2018-19ನೇ ಶೈಕ್ಷಣಿಕ ಸಾಲಿಗೆ ಶುಲ್ಕ**

| ಕ್ರ ಸಂ. | ಕೋರ್ಸ್ | ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಶುಲ್ಕ (ರೂಪಾಯಗಳಲ್ಲಿ) |
|---|---|---|
| 1. | ಡಿ.ಫಾರ್ಮ | 12,000/- |
| 2. | ಬಿ.ಫಾರ್ಮ | 24,000/- |
| 3. | ಎಂ.ಫಾರ್ಮ | 47,000/- |
| 4. | ಫಾರ್ಮ ಡಿ. | 24,000/- |
| 5. | ಫಾರ್ಮ ಡಿ. (ಪಿ.ಬಿ) | 98,000/- |

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ: 09.07.2018 ರಂದು 2018-19 ಮತ್ತು 2019-20ನೇ ಶೈಕ್ಷಣಿಕ ಸಾಲಿಗೆ ಎಲ್ಲಾ ಫಾರ್ಮಸಿ ಕೋರ್ಸ್‌ಗಳ ಸರ್ಕಾರಿ ಮತ್ತು ಆಡಳಿತ ಮಂಡಳಿ ಕೋಟಾ ಅನುಪಾತ ಹಾಗೂ 2018-19ನೇ ಶೈಕ್ಷಣಿಕ ಸಾಲಿಗೆ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳು ಶುಲ್ಕದ ಬಗ್ಗೆ ಸರ್ಕಾರ ಮತ್ತು ಖಾಸಗಿ ಫಾರ್ಮಸಿ ಕಾಲೇಜುಗಳ ಪರವಾಗಿ ಕರ್ನಾಟಕ ಫಾರ್ಮಸಿ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ನಡುವೆ ಸಹಮತದ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13.06.2018 ಮತ್ತು 15.06.2018ರಂದು ಕರ್ನಾಟಕ ಫಾರ್ಮಸಿ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್, ಕಾಲೇಜು ಪ್ರತಿನಿಧಿಗಳು ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿನ ಚರ್ಚಿತ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸದರಿ

......3

ಮ್ಯಾನೇಜ್‌ಮೆಂಟ್ ನವರ ಮನವಿ ಮತ್ತು ಇಲಾಖೆಯ ಅಂಕಿ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ರಾಜ್ಯದಲ್ಲಿನ ಖಾಸಗಿ ಫಾರ್ಮಸಿ ಕಾಲೇಜುಗಳ ಎಲ್ಲಾ ಫಾರ್ಮಸಿ ಕೋರ್ಸ್‌ಗಳಿಗೆ ಸರ್ಕಾರಿ ಮತ್ತು ಆಡಳಿತ ಮಂಡಳಿ ಕೋಟಾ ಸೀಟು ಅನುಪಾತ ಹಾಗೂ ಶುಲ್ಕವನ್ನು ಪರಿಷ್ಕರಿಸಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಆಕುಕ 103 ಪಿಟಿಡಿ 2018, ಬೆಂಗಳೂರು, ದಿನಾಂಕ: 10.07.2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಖಾಸಗಿ ಫಾರ್ಮಸಿ ಕಾಲೇಜುಗಳ ಎಲ್ಲಾ ಫಾರ್ಮಸಿ ಕೋರ್ಸ್‌ಗಳಿಗೆ 2018–19 ಮತ್ತು 2019–20ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಸೀಟುಗಳ ಕೋಟಾವನ್ನು ಹಾಗೂ 2018–19ನೇ ಶೈಕ್ಷಣಿಕ ಸಾಲಿಗೆ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದೆ.

**2018–19ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ.**

| ಕ್ರ. ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು. | ಷರಾ |
|---|---|---|---|---|
| 1. | ಡಿ.ಫಾರ್ಮ | 10% | 90% | ಕೇವಲ ಡಿ.ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |
| 2. | ಡಿ.ಫಾರ್ಮ | 20% | 80% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ. |
| 3. | ಬಿ.ಫಾರ್ಮ | 25% | 75% | – |
| 4. | ಎಂ.ಫಾರ್ಮ | 30% | 70% | – |
| 5. | ಫಾರ್ಮ ಡಿ. | 30% | 70% | – |
| 6. | ಫಾರ್ಮ ಡಿ. (ಪಿ.ಬಿ) | 30% | 70% | – |

**2019–20ನೇ ಶೈಕ್ಷಣಿಕ ಸಾಲಿಗೆ ಸೀಟು ಅನುಪಾತ.**

| ಕ್ರ. ಸಂ. | ಕೋರ್ಸ್ | ಸರ್ಕಾರಿ ಸೀಟುಗಳು | ಆಡಳಿತ ಮಂಡಳಿಯ ಸೀಟುಗಳು. | ಷರಾ |
|---|---|---|---|---|
| 1. | ಡಿ.ಫಾರ್ಮ | 20% | 80% | ಕೇವಲ ಡಿ.ಫಾರ್ಮಸಿ ಕೋರ್ಸ್ ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಿಗೆ ಮಾತ್ರ |

......4

| | | | | |
|---|---|---|---|---|
| 2. | ಡಿ.ಫಾರ್ಮ | 30% | 70% | ಡಿ.ಫಾರ್ಮ ಮತ್ತು ಇತರೆ ಫಾರ್ಮಸಿ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳಲ್ಲಿ. |
| 3. | ಬಿ.ಫಾರ್ಮ | 30% | 70% | – |
| 4. | ಎಂ.ಫಾರ್ಮ | 30% | 70% | – |
| 5. | ಫಾರ್ಮ ಡಿ. | 30% | 70% | – |
| 6. | ಫಾರ್ಮ ಡಿ. (ಪಿ.ಬಿ) | 30% | 70% | – |

**2018–19ನೇ ಶೈಕ್ಷಣಿಕ ಸಾಲಿಗೆ ಶುಲ್ಕ.**

| ಕ್ರ ಸಂ. | ಕೋರ್ಸ್ | ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಶುಲ್ಕ (ರೂಪಾಯಿಗಳಲ್ಲಿ) | ಷರಾ |
|---|---|---|---|
| 1. | ಡಿ.ಫಾರ್ಮ | 12,000/– | ಈ ಶುಲ್ಕವು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಶುಲ್ಕಗಳನ್ನು ಒಳಗೊಂಡಿರುತ್ತದೆ. |
| 2. | ಬಿ.ಫಾರ್ಮ | 24,000/– | |
| 3. | ಎಂ.ಫಾರ್ಮ | 47,000/– | |
| 4. | ಫಾರ್ಮ ಡಿ. | 24,000/– | |
| 5. | ಫಾರ್ಮ ಡಿ. (ಪಿ.ಬಿ) | 98,000/– | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)
(ದೂರವಾಣಿ ಸಂಖ್ಯೆ:220342

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಪತ್ಯೇರ ಶಾಖೆ ಹೊರಡಿಸಿದೆ
ದಿನಾಂಕ: 10/07/18
ಸಹಿ

ಇವರಿಗೆ:

1) ಪ್ರಧಾನ ಮಹಾಲೇಖಪಾಲರು(ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು– 560 001
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
3) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.

......5

151

4) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು.
5) ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ಸರ್ಕಲ್ ವೃತ್ತ, ಬೆಂಗಳೂರು.
6) ಕಾರ್ಯದರ್ಶಿ, ಕರ್ನಾಟಕ ಫಾರ್ಮಸಿ ಕಾಲೇಜ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್, ನರಗುಂದ ಕಾಲೇಜ್ ಆಫ್ ಫಾರ್ಮಸಿ, ದತ್ತಾತ್ರೇಯ ನಗರ, 2ನೇ ಮೇನ್, 100 ಅಡಿ ರಿಂಗ್ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 085.
7) ಸಂಬಂಧಿಸಿದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಅಪರ ಔಷಧ ನಿಯಂತ್ರಕರ ಮುಖಾಂತರ).

ಪ್ರತಿಗಳು:-

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.